"ಮಧುರ ಮಕ್ಕಳೇ - ಮಾಯೆಯ ರೋಗದಿಂದ ಬಿಡುಗಡೆ ಆಗಲು ಜ್ಞಾನ ಹಾಗೂ ಯೋಗದ ಸೇಬು ಹಣ್ಣು (ಆಪಲ್) ಪ್ರತಿ ನಿತ್ಯ ತಿನ್ನುತ್ತಿರಬೇಕು"

ಪ್ರಶ್ನೆ: ಕರ್ಮಾತೀತ ಸ್ಥಿತಿಯಲ್ಲಿ ಹೋಗುವ ಪುರುಷಾರ್ಥ ಏನಾಗಿದೆ?

ಉತ್ತರ: ಬುದ್ಧಿಯಲ್ಲಿ ಒಬ್ಬ ತಂದೆಯ ನೆನಪು ವಿನಹ ಬೇರೆಯಾರ ನೆನಪು ಬರದಂತೆ ಅಭ್ಯಾಸ ಮಾಡಬೇಕು. ಶರೀರ ಬಿಡುವ ಸಮಯದಲ್ಲಿ ಸ್ಥಿತಿ ಹೇಗೆ ಇರುತ್ತದೆಯೋ ಅಂತಹ ಪದವಿಯನ್ನು ಪಡೆದುಕೊಳ್ಳುತ್ತಾರೆ (ಅಂತ್ಯ ಮತಿ ಸೋ ಗತಿ...) ಇಂತಹ ಸ್ಥಿತಿ ಇರಬೇಕು. ಯಾರ ನೆನಪೂ ಬರಬಾರದು ಆಗ ಸದಾ ಹರ್ಷಿತರಾಗಿಯೂ ಇರುತ್ತಾರೆ ಹಾಗೂ ಕರ್ಮಾತೀತ ಸ್ಥಿತಿಯನ್ನು ಪಡೆದುಕೊಳ್ಳುತ್ತಾರೆ. ಆತ್ಮಾಭಿಮಾನಿಯಾಗುವುದೇ ನಿಮ್ಮ ಪುರುಷಾರ್ಥವಾಗಿದೆ. ಆತ್ಮ, ಆತ್ಮವನ್ನು ನೋಡಬೇಕು. ಆತ್ಮನೊಂದಿಗೆ ಮಾತನಾಡಿದಾಗ ಖುಷಿ ಇರುತ್ತದೆ. ಸ್ಥಿತಿ ಅಚಲವಾಗಿ ಬಿಡುತ್ತದೆ.

ಗೀತೆ: ತಾಯಿ ನೀವೇ, ತಂದೆ ನೀವೇ ..........

ಓಂ ಶಾಂತಿ. ಈ ಗೀತೆಯು ಯಥಾರ್ಥವಾಗಿದೆ ಏಕೆಂದರೆ ಇಡೀ ಸೃಷ್ಟಿಯ ರಚಯಿತ ಯಾರ ಮೂಲಕ ರಚನೆ ಮಾಡುತ್ತಾರೆ ಅವರನ್ನು ತಾಯಿ-ತಂದೆ ಎಂದು ಕರೆಯುತ್ತಾರೆ. ಯಾವುದೇ ಸಾಕಾರ ಅಥವಾ ಆಕಾರನಿಗೆ ರಚೈತನೆಂದು ಕರೆಯುವುದಿಲ್ಲ. ಒಬ್ಬ ನಿರಾಕಾರನಿಗೆ ಮಾತ್ರ ರಚೈತನೆಂದು ಕರೆಯಲಾಗುವುದು. ಈಗ ಈ ತಿಳುವಳಿಕೆಯು ಮಕ್ಕಳಿಗೆ ಬಂದಿದೆ, ಪ್ರಪಂಚದಲ್ಲಿ ಕೇವಲ ಹಾಡುತ್ತಾರೆ. ಭಕ್ತರ ಬುದ್ಧಿಯಲ್ಲಿ ಕೇವಲ ಭಕ್ತಿ ಮಾಡಬೇಕೆಂದು ತಿಳಿದಿರುತ್ತದೆ, ಆದರೆ ಯಾರ ಭಕ್ತಿ ಮಾಡಬೇಕೆಂದು ತಿಳಿದುಕೊಂಡಿಲ್ಲ. ಒಬ್ಬ ಭಗವಂತನ ಭಕ್ತಿ ಮಾಡಬೇಕು. ನೂರಾರು ಮಂದಿ ಭಕ್ತಿ (ಸೇವೆ) ಮಾಡುವುದನ್ನು ಬಿಟ್ಟು, ಯಾರಿಗೆ ತಾಯಿ-ತಂದೆ ಎಂದು ಹೇಳುತ್ತೇವೋ ಆ ಒಬ್ಬ ಭಗವಂತನ ಸೇವೆ ಮಾಡಬೇಕು. ಭಗವಂತ ಬಂದು ಭಕ್ತರಿಗೆ ಭಕ್ತಿಯ ಫಲ ನೀಡುವರೆಂದು ಹೇಳುತ್ತಾರೆ. ಫಲ ಅಥವಾ ಆಸ್ತಿ ಒಂದೇ ಮಾತಾಗಿದೆ. ತಾಯಿ-ತಂದೆಗೆ ಮಗು ಆದಾಗ ಅವರ ಆಸ್ತಿ ಸಿಗುತ್ತದೆ. ಉಳಿದಂತೆ ಇದೆಲ್ಲವೂ ಭಕ್ತಿ ಮಾರ್ಗದ ಮಹಿಮೆಯಾಗಿದೆ. ಭಕ್ತಿಯಲ್ಲಿ ಭಗವಂತನನ್ನು ಭಕ್ತಿಯ ಫಲವನ್ನು ನೀಡಲು ಬನ್ನಿ ಎಂದು ನೆನಪು ಮಾಡುತ್ತಾರೆ. ಜ್ಞಾನ ಹಾಗೂ ಭಕ್ತಿಯೆಂದು ಹೇಳಲಾಗುವುದು, ಭಕ್ತಿಯ ಫಲ ಜ್ಞಾನವಾಗಿದೆ. ಭಕ್ತಿ ಯಾವ ಸಮಯದಿಂದ ಆರಂಭವಾಗುವುದೆಂದು ನೀವೀಗ ತಿಳಿದುಕೊಂಡಿದ್ದೀರಿ. ಜ್ಞಾನದ ಸಮಯ ದಿನ, ಭಕ್ತಿಯ ಸಮಯ ರಾತ್ರಿಯಾಗಿದೆ ಎಂದು ಯಾರೂ ತಿಳಿದುಕೊಂಡಿಲ್ಲ. ಹಗಲು ರಾತ್ರಿಯು ಅವಶ್ಯವಾಗಿ ಅರ್ಧ-ಅರ್ಧ ಇರಬೇಕು, ಆದರೆ ಶಾಸ್ತ್ರಗಳಲ್ಲಿ ಕಲ್ಪವನ್ನು ದೀರ್ಘ ಸಮಯದವರೆಗೆ ತೋರಿಸಿದ್ದಾರೆ. ಜ್ಞಾನಕ್ಕೆ (ಸತ್ಯತ್ರೇತಾ) ಹೆಚ್ಚು ಸಮಯವನ್ನು ಕೊಟ್ಟು ಭಕ್ತಿಗೆ ಸ್ವಲ್ಪ ಸಮಯವನ್ನು ತೋರಿಸಿದ್ದಾರೆ. ಅರ್ಥಾತ್ ದ್ವಾಪರ-ಕಲಿಯುಗದ ಆಯಸ್ಸು ಕಡಿಮೆ ಮಾಡಿದ್ದಾರೆ. ಆ ಕಾರಣ ಹಗಲು ರಾತ್ರಿ ಸಮವಾಗಿಲ್ಲ. ಶಾಸ್ತ್ರಗಳಲ್ಲಿ ಶುಕ್ಲಪಕ್ಷ ಮತ್ತು ಕೃಷ್ಣ ಪಕ್ಷ ಎಂಬ ಎರಡು ಅಕ್ಷರಗಳನ್ನು ಹೇಳುತ್ತಾರೆ. ಒಂದುವೇಳೆ ಶಾಸ್ತ್ರಗಳ ಮಾತುಗಳನ್ನು ತಿಳಿಸಿಕೊಟ್ಟಾಗ - ನೀವು ಶಾಸ್ತ್ರಗಳ ಮಾತುಗಳನ್ನು ಒಪ್ಪಿಕೊಳ್ಳುವುದಿಲ್ಲ, ಆದರೆ ನೀವು ಶಾಸ್ರಗಳ ಅಕ್ಷರಗಳನ್ನು ಏಕೆ ಹೇಳುತ್ತೀರಿ ಎಂದು ಲೌಕಿಕದವರು ಕೇಳುತ್ತಾರೆ. ಆಗ ನೀವು ಅವರಿಗೆ ಈ ರೀತಿ ತಿಳಿಸಬೇಕು - ತಂದೆಯು ನಮಗೆ ಶಾಸ್ತ್ರಗಳ ಸಾರವನ್ನು ತಿಳಿಸಿಕೊಡುತ್ತಿದ್ದಾರೆ. ಶಾಸ್ತ್ರಗಳಲ್ಲಿರುವ ಸರಿ ತಪ್ಪುಗಳನ್ನು ನೀವು ಅಗತ್ಯವಾಗಿ ಸಿದ್ಧ ಮಾಡಿ ಹೇಳಬೇಕು. ನೀವು ಪ್ರದರ್ಶನದಲ್ಲಿ ಹನುಮಂತ, ಗಣೇಶ, ವಾಮನವತಾರ ಮೊದಲಾದ ಚಿತ್ರಗಳನ್ನು ತಿಳಿಸಿಕೊಡಲು ನೀವು ಇಡಬೇಕು. ಯಾವ ಮಾತು ತಪ್ಪಾಗಿದೆ ಅದನ್ನು ಸರಿ ಮಾಡಿ ತಿಳಿಸಿಕೊಡುತ್ತಿದ್ದೇವೆಂದು ಹೇಳಬೇಕು.

ತಂದೆಯ ಮಹಿಮೆಯನ್ನು ಶಿವಾಯ ನಮಃ ಎಂದು ಹಾಡುತ್ತಾರೆ, ನಂತರ ತ್ವಮೇವ ಮಾತಾಶ್ಚ ಪಿತ ಎಂದು ಬರೆಯುವಾಗ ನಿಶ್ಚಿತ ಹೆಸರನ್ನು ಬರೆಯಬೇಕು. ಮನುಷ್ಯರಿಗೆ ನಮ್ಮ ತಂದೆ ಯಾರು ಎಂದು ಗೊತ್ತಿಲ್ಲ. ಓ ಪರಮಪಿತ ಪರಮಾತ್ಮ ಎಂದು ಹೇಳುವಾಗ ಬುದ್ಧಿ ಮೇಲೆ ಪರಂಧಾಮದ ಕಡೆ ಹೋಗುತ್ತದೆ. ಈ ರೀತಿ ಮನುಷ್ಯರು ಪ್ರಾರ್ಥನೆ ಮೊದಲಾದವುಗಳನ್ನು ಮಾಡುವಾಗ ಪರಮಪಿತ ಪರಮಾತ್ಮ ಪರಲೋಕದಲ್ಲಿ ಇರುವರೆಂದು ತಿಳಿದುಕೊಳ್ಳುತ್ತಾರೆ. ಬ್ರಹ್ಮಾ, ವಿಷ್ಣು, ಶಂಕರರನ್ನು ನೆನಪು ಮಾಡುವಾಗ ಬುದ್ಧಿ ಸೂಕ್ಷ್ಮ ವತನದ ಕಡೆ ಹೋಗುತ್ತದೆ. ಒಂದನೇ, ಎರಡನೇ, ಮೂರನೆಯ ಅಂತಸ್ತು ಎಂದು ಹೇಳಬಹುದು (ತ್ರಿಲೋಕ). ಮುಖ್ಯವಾಗಿ ತಂದೆಯನ್ನು ಮರೆತಿದ್ದೇವೆ. ನೀವು ನನ್ನನ್ನು ಎಷ್ಟು ನಿಂದನೆ ಮಾಡಿದ್ದೀರೆಂದು ತಂದೆಯು ದೂರನ್ನು ಹೇಳುತ್ತಿದ್ದಾರೆ. ಸರ್ವರ ಸದ್ಗತಿದಾತನಾದ ತಂದೆಯನ್ನು ಎಲ್ಲರು ಕುಳಿತು ನಿಂದನೆ ಮಾಡಿದ್ದಾರೆ. ಭಗವಾನುವಾಚ ಯಧಾ ಯಧಾಹಿ.... ಹೀಗೆ ಭಾರತವಾಸಿಗಳು ತಮ್ಮ ಧರ್ಮದ ನಿಂದನೆ ಮಾಡಿದ್ದಾರೆ. ಈಶ್ವರ ಸರ್ವವ್ಯಾಪಿಯೆಂದು ಹೇಳಬೇಕಾದರೆ ಎಲ್ಲರಲ್ಲೂ ಈಶ್ವರನಿರಲು ಸಾಧ್ಯವೇ? ಆಗ ಕಚ್ಛಾವತಾರ, ಮತ್ಸ್ಯಾವತಾರ, ವರಹಾವತಾರ ಎಂದು ಹೇಳಿ ಭಾರತವಾಸಿಯರು ತಂದೆಯನ್ನು ಎಷ್ಟೊಂದು ನಿಂದನೆ ಮಾಡಿರುವುದಾಗಿ ತಿಳಿಸುತ್ತಿದ್ದಾರೆ. ಈ ನನ್ನ ಅನುಭವೀ ಮಗ (ಬ್ರಹ್ಮಾ) ನೂ ಸಹ ನಿಂದನೆ ಮಾಡುತ್ತಿದ್ದರು.

ಈ ನಿಂದನೆ ಮಾಡುವುದೂ ಸಹ ನಾಟಕದಲ್ಲಿ ನಿಗಧಿಯಾಗಿದೆ. ನಿಂದನೆ ಮಾಡುವ ಕಾರಣ ಪಾಪಾತ್ಮರಾಗುತ್ತೀರಿ. ತಂದೆಯು ಎಲ್ಲರನ್ನು ಪಾವನ ಮಾಡಿದ್ದರು ಏಕೆಂದರೆ ಅವರು ಪತಿತ ಪಾವನ ಆಗಿದ್ದಾರೆ. ಪಾವನ ಮಾಡಿ ವಿಶ್ವದ ಮಾಲೀಕರನ್ನಾಗಿ ಮಾಡುವ ತಂದೆಗೆ ಎಷ್ಟೊಂದು ನಿಂದನೆ ಮಾಡುತ್ತಾರೆ. ಯಾವಾಗ ಈ ಎಲ್ಲಾ ಮಾತುಗಳನ್ನು ತಿಳಿಸಿಕೊಡುತ್ತೇವೆ ಆ ಸಮಯದಲ್ಲಿ ಒಪ್ಪಿಕೊಳ್ಳುತ್ತಾರೆ. ತಂದೆಯು ಸಮಾಚಾರವನ್ನು ಕೊಡುತ್ತಾರೆ. ಇಂತಹವರಿಗೆ ನಾವು ತಿಳಿಸಿಕೊಟ್ಟಾಗ ಇದು ಸತ್ಯವೆಂದು ಸಹಿ ಮಾಡಿದರು. ಶ್ರೀಮತ್ ಭಗವತ್ಗೀತೆ ಎಂದು ಹೇಳುತ್ತಾರೆಂದಮೇಲೆ ಭಗವಂತನ ಮತ ಶ್ರೇಷ್ಠಾತಿ ಶ್ರೇಷ್ಠ ಮತವಾಗಿದೆ, ಅವರೇ ಬಂದು ಪತಿತ ಭ್ರಷ್ಟಾಚಾರಿ ಪ್ರಪಂಚವನ್ನು ಶ್ರೇಷ್ಠಾಚಾರಿಯನ್ನಾಗಿ ಮಾಡುತ್ತಿದ್ದಾರೆ ಎಂದು ಮೊಟ್ಟ ಮೊದಲು ಒಬ್ಬ ತಂದೆಯ ಪರಿಚಯವನ್ನು ಕೊಡಬೇಕು. ನೀವು ಮಕ್ಕಳೂ ಸಹ ನಂಬರ್ವಾರ್ ಆಗಿದ್ದೀರಿ. ಏಕೆಂದರೆ ಬಾಬಾ ಏನು ಮಾಡಲಿ, ಮಾಯೆಯ ಬಿರುಗಾಳಿ ನಮ್ಮನ್ನು ನಿಮ್ಮ ಮಗುವಾಗಿ ಇರಲು ಬಿಡುತ್ತಿಲ್ಲ. ನಮಗೆ ಇಂತಿಂತಹ ವಿಕಾರಗಳು ಕಷ್ಟ ಕೊಡುತ್ತವೆ ಎಂದು ಮಕ್ಕಳು ತಂದೆಗೆ ಪತ್ರ ಬರೆಯುತ್ತಾರೆ. ಮಕ್ಕಳೇ ನೀವು ಈ ಮಾಯೆಯ ಮೇಲೆ ನೀವು ವಿಜಯಿಗಳಾಗಬೇಕು, ಇಲ್ಲವಾದರೆ ನಿಮ್ಮ ಪದವಿ ಭ್ರಷ್ಟವಾಗಿ ಬಿಡುತ್ತದೆ ಎಂದು ತಂದೆ ತಿಳಿಸುತ್ತಾರೆ. ಒಂದುವೇಳೆ ತಿಳಿಸಿಕೊಡುವ ಶಿಕ್ಷಕನು ತಪ್ಪು ಮಾಡಿದಾಗ ಬೇರೆಯವರಿಗೂ ಅವಶ್ಯವಾಗಿ ಈ ರೀತಿ ಸಂಶಯ ಬರುತ್ತದೆ - ನಮಗೆ ಹೇಳುವಂತಹವರ ಚಲನೆ ಸರಿಯಿಲ್ಲ ಅಂದಾಗ ಬೇರೆಯವರಿಗೆ ಹೇಗೆ ಹೇಳಲು ಸಾಧ್ಯ. ವಿಕಾರದಲ್ಲೂ ಕೆಲವೊಮ್ಮೆ ಅರ್ಧ ನಶೆ, ಸತೋ, ರಜೋ, ತಮೋಪ್ರಧಾನ ಸ್ಥಿತಿಯು ಪ್ರತಿ ಮಾತಿನಲ್ಲೂ ಇರುತ್ತದೆ. ಸತ್ಯಯುಗವನ್ನು ಸತೋ ಶ್ರೇಷ್ಠವೆಂದು ಕಲಿಯುಗವನ್ನು ತಮೋ ಕನಿಷ್ಟ ಭ್ರಷ್ಟಾಚಾರಿ ಎಂದು ಕರೆಯಲಾಗುವುದು. ಆದರೆ ಪ್ರಪಂಚದಲ್ಲಿ ತಮ್ಮನ್ನು ಭ್ರಷ್ಟಾಚಾರಿಗಳೆಂದು ಯಾರೂ ತಿಳಿದುಕೊಂಡಿಲ್ಲ. ಈ ರಾವಣ ರಾಜ್ಯದಲ್ಲಿ ಶ್ರೇಷ್ಠಾಚಾರಿಗಳು ಒಬ್ಬರೂ ಇಲ್ಲವೆಂದು ತಂದೆ ತಿಳಿಸುತ್ತಾರೆ. ಒಂದುವೇಳೆ ಯಾರೊಂದಿಗಾದರೂ ಶ್ರೇಷ್ಠಾತಿ ಶ್ರೇಷ್ಠ ಯಾರಾಗಿದ್ದಾರೆ? ಎಂದು ಕೇಳಿದರೆ ಭಗವಂತ ಎಂದು ಹೇಳುತ್ತಾರೆ. ಆದರೆ ಅವರ ಕರ್ತವ್ಯವನ್ನು ತಿಳಿದುಕೊಂಡಿರುವುದಿಲ್ಲ. ಇಲ್ಲವಾದರೆ ಸನ್ಯಾಸಿಗಳು ಪವಿತ್ರರಾಗಿರುವ ಕಾರಣ ಅವರನ್ನು ಶ್ರೇಷ್ಠರೆಂದು ಹೇಳಿ ಬಿಡುತ್ತಾರೆ. ಪ್ರತಿಯೊಬ್ಬರು ಸ್ವಯಂ ಸನ್ಯಾಸಿಗಳಿಗೆ ಬಾಗಿ ಅವರನ್ನು ಅನುಸರಿಸುತ್ತಾರೆ, ಅಂತಹವರನ್ನು ನೀವು ಸನ್ಯಾಸಿಗಳಿಗಿಂತಲೂ ಶ್ರೇಷ್ಠರು ಬೇರೆ ಇರಬೇಕಲ್ಲವೆ ಎಂದು ಕೇಳಬೇಕು. ಏಕೆಂದರೆ ಸನ್ಯಾಸಿಯೂ ಸಹ ಭಗವಂತನನ್ನು ಪಡೆಯಲು ಸಾಧನೆ ಮಾಡುತ್ತಾರೆ. ವರ್ತಮಾನ ಸಮಯದಲ್ಲಿ ಭಕ್ತಿಗಾಗಿ ಅನೇಕ ಚಿತ್ರಗಳನ್ನು ಮಾಡುತ್ತಾರೆ. ಆದರೆ ಎಲ್ಲರಿಗೂ ಶ್ರೇಷ್ಠ ಸ್ಥಾನದಲ್ಲಿ ಪರಮಾತ್ಮನನ್ನು ಇಡುತ್ತಾರೆ. ಹೀಗೆ ರಾಮ ಅಥವಾ ಕೃಷ್ಣನ ಮುಂದೆ ಶಿವಲಿಂಗವನ್ನು ಇಡುವುದೂ ಸಹ ಪರಮಾತ್ಮನ ಶ್ರೇಷ್ಠತೆ ಆಗಿದೆ. ಅವರುಯಾರೂ ಸಹ ಶಿವನ ಪೂಜೆಯನ್ನು ಮಾಡುವುದಿಲ್ಲ. ಅವರು ಸ್ವಯಂ ಸ್ವರ್ಗದಲ್ಲಿ ಸುಖದಿಂದ ರಾಜ್ಯ ಮಾಡುತ್ತಾರೆ. ಹೀಗೆ ಅವರು ಪತಿತರಾದಾಗ ಶಿವನನ್ನು ಪೂಜೆ ಮಾಡುತ್ತಾರೆ. ಸರ್ವ ಶ್ರೇಷ್ಠರೆಂದು ಒಬ್ಬ ನಿರಾಕಾರ ಪರಮಾತ್ಮನಿಗೆ ಮಾತ್ರ ಕರೆಯಲಾಗುವುದು - ಅವರೇ ಪತಿತ ಪಾವನ ಸರ್ವರ ಸದ್ಗತಿದಾತ ಹಾಗೂ ಮುಕ್ತಿದಾತ ಆಗಿದ್ದಾರೆ. ಪರಮಾತ್ಮ ಒಬ್ಬರೇ ಎಲ್ಲರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವರು. ಈ ರೀತಿ ನಮ್ಮೆಲ್ಲರಿಗೂ ಅವರು ತಂದೆ ಆಗಿದ್ದಾರೆ. ಈ ಸಮಯದಲ್ಲಿ ನಾವು ರೋಗಿಗಳಾಗಿರುವ ಕಾರಣ ಜ್ಞಾನದಿಂದ ಶ್ರೀಮಂತರು ಹಾಗೂ ಆರೋಗ್ಯವಂತರಾಗಿ ಬಿಡುತ್ತೇವೆ. ಪ್ರತಿನಿತ್ಯ ಸೇಬಿನ ಹಣ್ಣನ್ನು ತಿಂದರೆ ಆರೋಗ್ಯವಂತರಾಗುತ್ತೀರೆಂದು ಹೇಳುತ್ತಾರೆ. ಮಾಯೆಯು ನಮ್ಮನ್ನು ರೋಗಿಯನ್ನಾಗಿ ಮಾಡಿದೆಯೆಂದು ನೀವು ಪ್ರತ್ಯಕ್ಷವಾಗಿ ನೋಡಿತ್ತಿದ್ದೀರಿ. ಈಗ ಎಲ್ಲರನ್ನು ಆರೋಗ್ಯ ಹಾಗೂ ಶ್ರೀಮಂತರನ್ನಾಗಿ ಮಾಡುವವರು ಒಬ್ಬ ತಂದೆ ಆಗಿದ್ದಾರೆ. ಸೂಕ್ಷ್ಮವತನದಲ್ಲಿಯೂ ಆತ್ಮಗಳು ಆರೋಗ್ಯವಾಗಿರುತ್ತಾರೆ, ಇಲ್ಲಿ ಅನಾರೋಗ್ಯ ಆತ್ಮಗಳಿದ್ದು ನಂತರ ಮೂಲವತನದಿಂದ ಆತ್ಮಗಳೆಲ್ಲರು ಸಾಕಾರ ಲೋಕಕ್ಕೆ ಬಂದಾಗ ಸುಖವನ್ನೇ ನೋಡುತ್ತಾರೆ. ಹೀಗೆ ತಂದೆ ಬ್ರಹ್ಮನ ಮುಖಾಂತರ ಬಹಳ ಸುಖ ಕೊಡುವರು. ಈ ಯಜ್ಞದಿಂದ ವಿನಾಶ ಜ್ವಾಲೆ ಪ್ರಜ್ವಲಿತವಾಗಿ ವಿನಾಶವಂತೂ ಆಗಿಯೇಆಗುತ್ತದೆ. ಪ್ರಪಂಚದವರು ಶಾಂತಿಯ ಸ್ಥಾಪನೆಗಾಗಿ ಅನೇಕ ಸಲಹೆಗಳನ್ನು ನೀಡುವರು, ಆದರೆ ಮನುಷ್ಯರು ಒಂದನ್ನು ಬಯಸಿದರೆ....... ಎಂಬ ಗಾಯನವಿದೆ. ಯಾವಾಗ ವಿನಾಶವಾಗುತ್ತದೆ ಆಗ ಶಾಂತಿಯ ಸ್ಥಾಪನೆ ಆಗುವುದು. ನಂತರ ಎಲ್ಲಾ ಆತ್ಮಗಳು ಮುಕ್ತಿಧಾಮಕ್ಕೆ ಹೊರಟು ಹೋಗುತ್ತಾರೆ. ಶಾಂತಿ ಸ್ಥಾಪನೆಗಾಗಿ ವಿನಾಶ ಆಗದೆ ಬೇರೆ ಉಪಾಯವೇ ಇಲ್ಲ. ಈ ಮಾತುಗಳನ್ನು ಅವರಿಗೆಯಾರು ಹೇಳುತ್ತಾರೆ? ಭೀಷ್ಮಪಿತ ಮೊದಲಾದವರಿಗೆ ಅಂತ್ಯದಲ್ಲಿ ಜ್ಞಾನ ಸಿಗುತ್ತದೆ.

ಪರಸ್ಪರ ಎಲ್ಲರೂ ಒಂದಾದಾಗ ಶಾಂತಿ ಸಿಗುತ್ತದೆ ಎಂದು ಮನುಷ್ಯರು ಶಾಂತಿಗಾಗಿ ಉಪಾಯವನ್ನು ಹುಡುಕುತ್ತಾರೆ. ಆದರೆ ಹೀಗೆ ಆಗುವುದಿಲ್ಲ. ಏಕೆಂದರೆ ಕಲ್ಪದ ಹಿಂದೆಯು ವಿನಾಶವಾಗಿತ್ತು. ಗೀತೆಯ ಭಗವಂತನೂ ಸಹ ಬಂದಿದ್ದಾರೆ. ಯಾದವರು ಕೌರವರೂ ಸಹ ಇದ್ದರು. ಈ ಪತಿತ ಪ್ರಪಂಚದಲ್ಲಿ ಶ್ರೇಷ್ಠಾಚಾರಿಗಳು ಒಬ್ಬರೂ ಇರಲು ಸಾಧ್ಯವಿಲ್ಲ. ಲಕ್ಷ್ಮೀ ನಾರಾಯಣರು ಎಲ್ಲರಿಗಿಂತ ಶ್ರೇಷ್ಠರಾಗಿದ್ದರು ಅವರು ಸತ್ಯಯುಗದಲ್ಲಿ ರಾಜ್ಯ ಮಾಡುತ್ತಿದ್ದರು. ಈಗ ಭ್ರಷ್ಟಾಚಾರಿಗಳ ವೃದ್ಧಿ ಆಗುತ್ತಿರುವ ಕಾರಣ ಅವಶ್ಯವಾಗಿ ವಿನಾಶ ಆಗಬೇಕು. ವಿನಾಶದ ನಂತರವೇ ಎಲ್ಲರೂ ಸುಖ ಶಾಂತಿಯನ್ನು ಪಡೆಯುವರು. ಮೊದಲು ದೇವೀ-ದೇವತಾ ಧರ್ಮವಿತ್ತು, ಆ ಧರ್ಮ ಈಗ ಇಲ್ಲವಾಗಿದೆ ಪುನಃ ಸ್ಥಾಪನೆಯಾಗುತ್ತಿದೆ ಎಂದು ಎಲ್ಲರಿಗೂ ತಿಳಿಸಿಕೊಡಬೇಕು. ಈಗ ನಾವು ಬ್ರಾಹ್ಮಣರಾಗಿದ್ದೇವೆ ದೇವತೆಗಳಲ್ಲ. ಯಾವಾಗ ಯಾರಾದರೂ ಭಾಷಣ ಮಾಡಲು ಮಂಚದ ಮೇಲೆ ಬರಬೇಕಾದರೆ ಅಲ್ಪ ಸ್ವಲ್ಪ ಚಿಂತನೆ ಹಾಗು ವಿಚಾರ ಮಾಡಿ ಹೇಳಲು ಬರುತ್ತಾರೆ. ಆದರೆ ಬ್ರಾಹ್ಮಣ ಮಕ್ಕಳು ಏನು ಹೇಳಬೇಕೆಂದು ತಿಳಿದುಕೊಳ್ಳುತ್ತಾರೆ, ಕಾರಣ ಶಾಂತಿ ಸ್ಥಾಪನೆ ಮಾಡಿ ಸರ್ವರ ಸದ್ಗತಿದಾತ, ಮುಕ್ತಿದಾತ ಒಬ್ಬ ತಂದೆಯೇ ಆಗಿದ್ದಾರೆ. ಎಲ್ಲರನ್ನು

ಹಿಂತಿರುಗಿ ಕರೆದೊಯ್ಯುವ ಸಮಯ ಇದೇ ಆಗಿದೆ.

ಬಾಬಾ ಮಕ್ಕಳನ್ನು ಕೇಳುತ್ತಾರೆ - ಮಕ್ಕಳೇ ನೀವು ತಮನ್ನು ಸತ್ಯಯುಗದಲ್ಲಿ ಬರಲು ಯೋಗ್ಯರೆಂದು ತಿಳಿದುಕೊಳ್ಳುತ್ತೀರಾ? ರಾವಣನ ಮೇಲೆ ವಿಜಯಿಗಳಾಗಿದ್ದೀರಾ? ಬಾಬಾ ವಿಜಯಿಗಳಾಗಲು ಪುರುಷಾರ್ಥ ಮಾಡುತ್ತಿದ್ದೇವೆಂದು ಮಕ್ಕಳು ಹೇಳುತ್ತಾ ನಾಚಿಕೆಯಿಂದ ತಮ್ಮ ಕೈಯನ್ನೂ ಸಹ ಎತ್ತುತ್ತಾರೆ. ಬಾಬಾ ಹೇಳುತ್ತಾರೆ - ನಾವು ಎಷ್ಟು ಸಮಯ ತಂದೆ ನೆನಪು ಮಾಡುತ್ತೇವೆಂದು ತಮ್ಮ ಮುಖವನ್ನು ನೋಡಿಕೊಳ್ಳಿ? ಅಂತಿ ಮತಿ ಸೋ ಗತಿ ಇದ್ದಾಗ ಕರ್ಮಾತೀತ ಸ್ಥಿತಿಯನ್ನು ಪಡೆಯಬಹುದು. ಅಂತ್ಯದಲ್ಲಿ ಯಾರ ನೆನಪು ಬಾರದಂತೆ ನಮ್ಮ ಸ್ಥಿತಿಯನ್ನು ಮಾಡಿಕೊಂಡಾಗ ಸದಾ ಹರ್ಷಿತರಾಗಿದ್ದು ಅನ್ಯರ ಸೇವೆ ಮಾಡಬಹುದು. ನೀವು ಆತ್ಮಿಕ ಸಮಾಜ ಸೇವಕರಾಗಿದ್ದೀರಿ, ನಿಮ್ಮ ವಿನಹ ಆತ್ಮಕ್ಕೆ ಬೇರೆಯಾರೂ ಸಹ ಇಂಜೆಕ್ಷನ್ ಕೊಡಲು ಸಾಧ್ಯವಿಲ್ಲ. ಜ್ಞಾನ ಅಂಜನ ಸದ್ಗುರು ನೀಡುವರೆಂದು ಗಾಯನವಿದೆ..... ನನಗೆ ಇಡೀ ವಿಶ್ವದ ಆದಿ-ಮಧ್ಯ-ಅಂತ್ಯದ ಜ್ಞಾನ ಪ್ರಾಪ್ತಿಯಾಗುತ್ತಿದೆ ಎಂದು ಆತ್ಮನಿಗೆ ಗೊತ್ತಾಗಿದೆ. ಈಗ ನಾವು ಮನೆಗೆ ಹಿಂತಿರುಗುವುದು ತುಂಬಾ ಖುಷಿಯ ಮಾತಾಗಿದೆ ಆತ್ಮ ಹಳೆಯ ವಸ್ತ್ರವನ್ನು ಕಳಚಿ ಹೊಸ ವಸ್ತ್ರವನ್ನು ಪಡೆಯಬೇಕಾಗುವುದು. ಈ ಕಾರಣದಿಂದ ಶ್ಯಾಮ ಸುಂದರ ಎಂಬ ಹೆಸರು ಇದೆ. ಈ ಎಲ್ಲಾ ಮಾತುಗಳನ್ನು ಆತ್ಮವು ಶರೀರದ ಮುಖಾಂತರ ಜ್ಞಾನ ಸಾಗರನಿಗೆ ಹೇಳುತ್ತದೆ.

ನಾವು ಸುಂದರ (ಪಾವನ) ಆಗಿದ್ದೇವು, ಈಗ ಶ್ಯಾಮ (ಪತಿತ) ಆಗಿದ್ದೇವೆ, ಪುನಃ ಸುಂದರ ಆಗುತ್ತೇವೆ ಎಂದು ನೀವು ತಿಳಿದುಕೊಂಡಿದ್ದೀರಿ. ತಂದೆ ನಮ್ಮನ್ನು ಸುಂದರ ಮಾಡುತ್ತಾರೆ, ಮಾಯಾ ರಾವಣ ಶ್ಯಾಮ ಮಾಡುತ್ತಾನೆ. ಕಾಮ ಚಿತೆಯ ಮೇಲೆ ಕುಳಿತುಕೊಳ್ಳುವುದರಿಂದ ಪತಿತರಾಗಿ ಬಿಡುತ್ತೇವೆ. ಇದು ತುಂಬಾ ತಿಳಿದುಕೊಳ್ಳುವ ಸಹಜ ಮಾತುಗಳಾಗಿವೆ. ವಿದ್ಯಾರ್ಥಿಗಳ ಬುದ್ಧಿಯಲ್ಲಿ ನಂಬರ್ವಾರ್ ಜ್ಞಾನ ಧಾರಣೆ ಆಗುತ್ತದೆ. ಕೆಲವರಂತೂ ತುಂಬಾ ಕಡಿಮೆ ಬುದ್ಧಿಯವರು ಇರುತ್ತಾರೆ. ತುಂಬಾ ದೇಹಾಭಿಮಾನ ಇರುವ ಕಾರಣ ಓದುವವರು ಬಲಹೀನರಾಗಿರುತ್ತಾರೆಂದು ಶಿಕ್ಷಕರು ಹೇಳಬೇಕಾಗುತ್ತದೆ. ಆತ್ಮಾಭಿಮಾನಿಯಾಗಿದ್ದರೆ ಸದಾ ಹರ್ಷಿತರಾಗಿದ್ದು, ಆತ್ಮನಾಗಿ ಆತ್ಮನನ್ನು ನೋಡುತ್ತಾ ಅರ್ಥಾತ್ ತನ್ನ ಸಹೋದರನನ್ನು ನೋಡಿ ಖುಷಿ ಆಗುತ್ತದೆ. ತಂದೆಯೂ ಸಹ ಮಕ್ಕಳನ್ನು ನೋಡಿ ಖುಷಿ ಆಗುತ್ತಾರೆ.

ತಂದೆ ತಿಳಿಸುತ್ತಾರೆ - ಮಕ್ಕಳೇ ನಾನು ನಿಮ್ಮನ್ನು ಮಾಯೆಯಿಂದ ಬಿಡಿಸಿ ಮನೆಗೆ ಹಿಂತಿರುಗಿ ಕರೆದುಕೊಂಡು ಹೋಗಲು ಬಂದಿದ್ದೇನೆ. ನಂದೀಗಣ (ಬ್ರಹ್ಮಾ ಬಾಬಾ) ದಲ್ಲೂ ಅವಶ್ಯವಾಗಿ ತಮ್ಮ ಆತ್ಮ ಇರಬೇಕು. ಶಿವ ತಂದೆಯು ಪ್ರವೇಶವಾದಾಗ ಅವರ ಆತ್ಮವು ಭೃಕುಟಿಯ ಮಧ್ಯದಲ್ಲಿ ಇರಬೇಕಾಗುವುದು. ಶಿವನನ್ನು ಬಸವನ ಮೇಲೆ ತೋರಿಸುತ್ತಾ ತಲೆಯ ಮೇಲೆ ಗಂಗೆಯನ್ನು ತೋರಿಸುತ್ತಾರೆ. ಬಸವನ ಭೃಕುಟಿಯಲ್ಲಿ ಶಿವನ ಚಿತ್ರವನ್ನು ತೋರಿಸಲಾಗಿದೆ. ಆದರೆ ಈ ರೀತಿಯಿರಲು ಸಾಧ್ಯವಿಲ್ಲ. ಅಗತ್ಯವಾಗಿ ಆತ್ಮ ಭೃಕುಟಿಯ ಮಧ್ಯದಲ್ಲಿರುತ್ತದೆ, ಆತ್ಮನ ಸ್ಥಾನದಲ್ಲಿಯೇ ಪರಮಾತ್ಮ ಕುಳಿತುಕೊಳ್ಳುತ್ತಾರೆ. ಹೇಗೆ ಗುರುಗಳು ಶಿಷ್ಯರನ್ನು ತಮ್ಮ ಪಕ್ಕದಲ್ಲಿಯೇ ಕುಳಿತುಕೊಳ್ಳಲು ಹೇಳುತ್ತಾರೆ. ಹಾಗೆಯೇ ಸದ್ಗುರು ತಂದೆ ಬಂದು ಬ್ರಹ್ಮಾರವರ ಆತ್ಮನ ಪಕ್ಕದಲ್ಲಿ ಕುಳಿತುಕೊಳ್ಳುತ್ತಾರೆ. ಗುರು ಬ್ರಹ್ಮಾಎಂದು ಹೇಳುವರು, ವಿಷ್ಣು ಅಥವಾ ಶಂಕರನಿಗೆ ಗುರು ಎಂದು ಹೇಳಲಾಗುವುದಿಲ್ಲ. ಈ ರೀತಿ ಅದೇ ಬ್ರಹ್ಮಾ ನಂತರ ವಿಷ್ಣುವಿನ ಎರಡು ರೂಪ ಶ್ರೀ ಲಕ್ಷ್ಮೀ ಶ್ರೀ ನಾರಾಯಣರಾಗುತ್ತಾರೆ. ಆದುದರಿಂದ ಸರ್ವರ ಸದ್ಗತಿದಾತ ಸರ್ವ ಶ್ರೇಷ್ಠ ಭಗವಂತ ಶಿವನಿಗೆ ಗುರುಎಂದು ಹೇಳಬೇಕು. ತಂದೆಯು ಎಷ್ಟೊಂದು ಚೆನ್ನಾಗಿ ತಿಳಿಸಿಕೊಡುತ್ತಿದ್ದಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸದಾ ಹರ್ಷಿತರಾಗಿರಲು ಆತ್ಮಾಭಿಮಾನಿಯಾಗಬೇಕು. ನಾವು ಆತ್ಮರು ಸಹೋದರ-ಸಹೋದರರಾಗಿದ್ದೇವೆ ಎಂಬ ದೃಷ್ಟಿ ಪಕ್ಕಾ ಮಾಡಿಕೊಳ್ಳಬೇಕು.

2. ಆತ್ಮಿಕ ಸಮಾಜ ಸೇವಕರಾಗಿ ಆತ್ಮನಿಗೆ ಜ್ಞಾನದ ಇಂಜೆಕ್ಷನ್ ಕೊಡಬೇಕು. ಎಲ್ಲರಿಗೂ ಆತ್ಮಿಕ ಸೇವೆ ಮಾಡಬೇಕು.

ವರದಾನ: ಸಂತುಷ್ಟತೆಯ ಆಧಾರದ ಮೇಲೆ ಆಶೀರ್ವಾದ ಕೊಡುವ ಹಾಗೂ ಪಡೆಯುವಂತಹ ಸಹಜ ಪುರುಷಾರ್ಥಿ ಭವ.

ಸರ್ವರ ಆಶೀರ್ವಾದಗಳು ಅವರಿಗೇ ಸಿಗುತ್ತದೆ, ಯಾರು ಸ್ವಯಂ ಸಂತುಷ್ಟವಾಗಿದ್ದು ಸರ್ವರನ್ನೂ ಸಂತುಷ್ಟಗೊಳಿಸುತ್ತಾರೆ. ಎಲ್ಲಿ ಸಂತುಷ್ಟತೆಯಿದೆಯೋ ಅಲ್ಲಿ ಆಶೀರ್ವಾದವಿರುತ್ತದೆ. ಒಂದುವೇಳೆ ಸರ್ವಗುಣಗಳನ್ನು ಧಾರಣೆ ಮಾಡುವ ಅಥವ ಸರ್ವ ಶಕ್ತಿಗಳನ್ನು ನಿಯಂತ್ರಣ ಮಾಡುವುದರಲ್ಲಿ ಪರಿಶ್ರಮವಾಗುತ್ತದೆ ಎಂದರೆ ಅದನ್ನೂ ಬಿಟ್ಟು ಬಿಡಿ, ಕೇವಲ ಅಮೃತವೇಳೆಯಿಂದ ರಾತ್ರಿಯವರೆಗೂ ಆಶೀರ್ವಾದ ಕೊಡುವ ಹಾಗೂ ಆಶೀರ್ವಾದ ತೆಗೆದುಕೊಳ್ಳುವ ಒಂದೇ ಕಾರ್ಯವನ್ನು ಮಾಡಿರಿ, ಇದರಲ್ಲಿ ಎಲ್ಲವೂ ಬಂದು

ಬಿಡುತ್ತದೆ. ಯಾರೇ ದುಃಖವನ್ನೇ ಕೊಟ್ಟರೂ ಸಹ ತಾವು ಆಶೀರ್ವಾದವನ್ನು ಕೊಡುತ್ತೀರೆಂದರೆ ಸಹಜ ಪುರುಷಾರ್ಥಿ ಆಗಿ ಬಿಡುವಿರಿ.

ಸ್ಲೋಗನ್: ಯಾರು ಸಮರ್ಪಿತ ಸ್ಥಿತಿಯಲ್ಲಿರುತ್ತಾರೆಯೋ ಅವರ ಮುಂದೆ ಸರ್ವರ ಸಹಯೋಗವು ಸ್ವತಹವಾಗಿಯೇ ಸಮರ್ಪಿತವಾಗುತ್ತದೆ.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ:

"ಮನುಷ್ಯಾತ್ಮನ ತನ್ನ ಸಂಪೂರ್ಣ ಸಂಪಾದನೆಯ ಅನುಸಾರ ಭವಿಷ್ಯ ಪ್ರಾಲಬ್ಧವನ್ನು ಭೋಗಿಸುತ್ತಾರೆ"

ಬಹಳ ಮನುಷ್ಯರು ಈ ರೀತಿ ತಿಳಿಯುತ್ತಾರೆ - ಈ ಜ್ಞಾನವು ನಮ್ಮ ಪೂರ್ವ ಜನ್ಮಗಳ ಒಳ್ಳೆಯ ಸಂಪಾದನೆಯಿಂದ ಪ್ರಾಪ್ತಿಯಾಗಿದೆ ಆದರೆ ಇಂತಹ ಮಾತಿರುವುದೇ ಇಲ್ಲ, ಪೂರ್ವ ಜನ್ಮದ ಒಳ್ಳೆಯ ಫಲವಿದೆ ಎಂದು ನಮಗೆ ಗೊತ್ತಿದೆ. ಕಲ್ಪದ ಚಕ್ರವು ಸತೋ, ರಜೊ, ತಮೋದಲ್ಲಿ ಪರಿವರ್ತನೆಯಾಗಿ ಸುತ್ತುತ್ತಿರುತ್ತದೆ ಆದರೆ ಡ್ರಾಮಾದನುಸಾರ ಪುರುಷಾರ್ಥದಿಂದ ಪ್ರಾಲಬ್ಧವಾಗುವ ಅವಕಾಶವಿದೆ, ಅದರಿಂದ ಸತ್ಯಯುಗದಲ್ಲಿಯೂ ಕೆಲವರು ರಾಜ-ರಾಣಿ, ಕೆಲವರು ದಾಸಿ, ಕೆಲವರು ಪ್ರಜಾ ಪದವಿಯನ್ನು ಪಡೆದುಕೊಳ್ಳುವರು. ಅಂದಮೇಲೆ ಇದೇ ಪುರುಷಾರ್ಥದ ಸಿದ್ಧಿಯಾಗಿದೆ, ಅಲ್ಲಿ ದ್ವೈತ, ಈರ್ಷ್ಯೆಯಿರುವುದಿಲ್ಲ, ಅಲ್ಲಿ ಪ್ರಜೆಗಳೂ ಸಹ ಸುಖಿಯಾಗಿದ್ದಾರೆ. ರಾಜಾ-ರಾಣಿ, ಪ್ರಜೆಗಳನ್ನು ಈ ರೀತಿ ಸಂಭಾಲನೆ ಮಾಡುತ್ತಾರೆ, ಹೇಗೆಂದರೆ ತಾಯಿ-ತಂದೆಯು ತನ್ನ ಮಕ್ಕಳ ಪಾಲನೆ ಮಾಡುತ್ತಾರೆ. ಅಲ್ಲಿ ಬಡವ-ಸಾಹುಕಾರರೆಲ್ಲರೂ ಸಂತುಷ್ಟವಾಗಿದ್ದಾರೆ, ಈ ಒಂದು ಜನ್ಮದ ಪುರುಷಾರ್ಥದಿಂದ 21 ಪೀಳಿಗೆಗಳಿಗಾಗಿ ಸುಖವನ್ನು ಭೋಗಿಸುವರು. ಇದು ಅವಿನಾಶಿ ಸಂಪಾದನೆಯಾಗಿದೆ, ಆ ಸಂಪಾದನೆಯಲ್ಲಿ ಅವಿನಾಶಿ ಜ್ಞಾನದಿಂದ ಅವಿನಾಶಿ ಪದವಿಯು ಸಿಗುತ್ತದೆ. ನಾವೀಗ ಸತ್ಯಯುಗಿ ಪ್ರಪಂಚದಲ್ಲಿ ಸಾಗುತ್ತಿದ್ದೇವೆ, ಪ್ರತ್ಯಕ್ಷದಲ್ಲಿ ಈ ಆಟವು ನಡೆಯುತ್ತಿದೆ. ಇಲ್ಲಿ ಯಾವುದೇ ಛೂ ಮಂತ್ರದ ಮಾತಿಲ್ಲ. ಒಳ್ಳೆಯದು - ಓಂ ಶಾಂತಿ.